ಆರ್.ಟಿ.ಓ. ಕಛೇರಿಯ ವ್ಯವಹಾರ

1547(924); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ರಾಜ್ಯದಲ್ಲಿರುವ ಆರ್.ಟಿ.ಓ ಕಛೇರಿಯ ವ್ಯವಹಾರವನ್ನು ಗಣಕೀಕರಣಗೊಳಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಆ) ಕೊಡಗು ಜಿಲ್ಲೆಯ ಗಣಕೀಕರಣ ಪೂರ್ಣಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಸಾರಿಗೆ ಇಲಾಖೆಯಲ್ಲಿರುವ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ನ್ಯಾಷನಲ್ ಇನ್‌ಫಾರ್ಮೆಟಿಕ್ಸ್ ಸೆಂಟರ್ (ಎನ್.ಐ.ಸಿ) ಇವರ ನೆರವಿನೊಂದಿಗೆ **ವಾಹನ್** ಮತ್ತು **ಸಾರಥಿ** ತಂತ್ರಾಂಶಗಳೊಂದಿಗೆ ಗಣಕೀಕರಣಗೊಳಿಸಲಾಗಿದೆ. 'ಇ–ಪಾವತಿ' ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ, ಭಾರತೀಯ ರಿಸರ್ವ್ ಬ್ಯಾಂಕ್ ಇವರ ದಿ: 27–01–2015 ರ ಪತ್ರದ ಪ್ರಕಾರ, 'ಇ–ಪಾವತಿ' ಯನ್ನು ಖಜಾನೆ–II ರೊಂದಿಗೆ ಸಂಯೋಜಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಆ) ಕೊಡಗು ಜಿಲ್ಲೆಯ ಪ್ರಾದೇಶಿಕ ಸಾರಿಗೆ ಕಛೇರಿಯ ಗಣಕೀಕರಣವು 2009ನೇ ಇಸವಿಯಲ್ಲಿ ಪೂರ್ಣಗೊಂಡಿರುತ್ತದೆ.

ಇ) ಅನ್ವಯಿಸುವುದಿಲ್ಲ.